ಈ) ಇದುವರೆಗೆ ಎಷ್ಟನ್ನು ಕಂದಾಯ ಗ್ರಾಮವಾಗಿ ಪರಿವರ್ತಿಸಲಾಗಿದೆ. (ವಿವರ ನೀಡುವುದು)?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು):

ಅ) ಬಸವನಬಾಗೇವಾಡಿ ತಾಲ್ಲೂಕಿನಲ್ಲಿರುವ ಮಜರ್ ಗ್ರಾಮಗಳ ಸಂಖ್ಯೆ 4

ತಾಂಡಾಗಳ ಸಂಖ್ಯೆ - 10

ಆ) ಇದೆ.

ಇ) ಸರ್ಕಾರದ ಆಳತೆಗೋಲಿನಂತೆ ಅಂದರೆ 100 ಕುಟುಂಬ ಅಥವಾ 500 ಜನ ಸಂಖ್ಯೆ ಇರುವ ತಾಂಡಾಗಳನ್ನು : ಮಜರ್‌ಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲಾಗುತ್ತಿತ್ತು. ಈ ಮಾನದಂಡವನ್ನು ಸಡಿಲಿಸಿ ಮಜರ್ : ತಾಂಡಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಇದುವರೆಗೆ ಬಿಜಾಪುರ ಜಿಲ್ಲೆಯಲ್ಲಿ ಆರು ತಾಂಡಾಗಳನ್ನು ಕಂದಾಯ ಗ್ರಾಮವನ್ನಾಗಿ ಪರಿವರ್ತಿಸಲಾಗಿದೆ. ಅವುಗಳ ವಿವರ-

(1) ಉಪ್ಪಲದಿನ್ನಿ (2) ಉಕ್ಕಲಿ (3) ಇಂಗಳೇಶ್ವರ (4) ಕೂಡಗಿ

(5) ಸಾತಿಹಾಳ (6) ಉತ್ನಾಳ.

ಮುಜರಾಯಿ ಇಲಾಖೆಗೆ ಸಂಬಂಧಿಸಿದಂತೆ

189(260) ಶ್ರೀ ಚಲುವರಾಯ ಸ್ವಾಮಿ ಎನ್ (ನಾಗಮಂಗಲ) ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. 1999 ರಿಂದ 2002ನೇ ಸಾಲಿನ ಮಾರ್ಚ್ ವರೆಗೂ ನಾಗಮಂಗಲ ತಾಲ್ಲೂಕಿನ ಎಷ್ಟು ದೇವಾಲಯಗಳಿಗೆ ಧನ ಸಹಾಯ ಮಂಜೂರು ಮಾಡಲಾಗಿದೆ?

2. ಪ್ರತಿಯೊಂದು ದೇವಸ್ಥಾನಕ್ಕೂ ಮಂಜೂರಾದ ಹಣವೆಷ್ಟು ಹಾಗೂ ಮುಂದೆ ಮಂಜೂರು ಮಾಡಬಹುದಾದ ದೇವಸ್ಥಾನಗಳ ಪಟ್ಟಿ ಹಾಗೂ ಧನ ಸಹಾಯದ ವಿವರ ನೀಡುವುದು?

3. ನಾಗಮಂಗಲ ಮತ ಕ್ಷೇತ್ರದಲ್ಲಿ ಮುಜರಾಯಿ ಇಲಾಖೆಯಿಂದ ಆರಾಧನಾ ಸಮಿತಿ ರಚಿಸದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಯಾವಾಗ ರಚಿಸಲಾಗುವುದು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು)

1. ನಾಗಮಂಗಲ ತಾಲ್ಲೂಕಿನ ದೇವಸ್ಥಾನಗಳಿಗೆ ಧನ ಸಹಾಯ ಮಂಜೂರು ಮಾಡಿದ ವಿವರ ಈ ಕೆಳಕಂಡಂತಿದೆ.

ವರ್ಷ	ಧಾರ್ಮಿಕ ಸಂಸ್ಥೆಗಳ ಸಂಖ್ಯೆ	ಒಟ್ಟು ಮೊತ್ತ
1999-2000	3 ಸಂಸ್ಥೆ	ರೂ. 1.00 ಲಕ್ಷ
2000-2001	4 ಸಂಸ್ಥೆ	ರೂ. 1.60 ಲಕ್ಷ
2001-2002	8 ಸಂಸ್ಥೆ	ರೂ. 1.65 ಲಕ್ಷ
	15 ಸಂಸ್ಥೆ	ರೂ. 4.25 ಲಕ್ಷ

2. ಅನುದಾನ ಮಂಜೂರಾದ ದೇವಸ್ಥಾನಗಳ ವಿವರ ಅನುಬಂಧ-1ರಲ್ಲಿ ಲಗತ್ತಿಸಿದೆ. 2002-03ನೇ ಸಾಲಿಗೆ ಸಂಬಂಧಿಸಿದಂತೆ ಅನುದಾನ ಕೋರಿಕೆ ಬಗ್ಗೆ ಪ್ರಸ್ತಾವನೆಗಳು ಸ್ವೀಕೃತವಾಗಿರುವುದಿಲ್ಲ.

3. ಹೌದು, ಆರಾಧನಾ ಸಮಿತಿಯನ್ನು ರಚಿಸುವ ಬಗ್ಗೆ ಶೀಘ್ರವಾಗಿ ಕ್ರಮ ಕೈಗೊಳ್ಳಲಾಗುವುದು.

1999-2002ನೇ ಸಾಲಿನವರೆಗೂ ನಾಗಮಂಗಲ ತಾಲ್ಲೂಕಿನ ದೇವಾಲಯಗಳಿಗೆ ಧನ ಸಹಾಯ ಮಂಜೂರು ಮಾಡಿರುವ ವಿವರ

ಅನುಬಂಧ

99-2000

1. ಲಕ್ಷ್ಮೀದೇವಿ ದೇವಾಲಯ, ಟಿ.ಬಿ. ಬಡಾವಣೆ, ನಾಗಮಂಗಲ ತಾಲ್ಲೂಕು 25000
2. ಶ್ರೀ ಆಂಜನೇಯಸ್ವಾಮಿ ದೇವಾಲಯ, ದೇವಲಾಪುರ, ನಾಗಮಂಗಲ ತಾ. 50000
3. ಶ್ರೀ ವೆಂಕಟರಮಣಸ್ವಾಮಿ ದೇವಾಲಯ, ಕೊಟೆಬೆಟ್ಟ, ನಾಗಮಂಗಲ ತಾ. 25000

2000-2001

1. ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ, ಕಾರಬೈಲು, ನಾಗಮಂಗಲ ತಾ. 40000
2. ಶ್ರೀ ವೆಂಕಟರಮಣಸ್ವಾಮಿ ದೇವಾಲಯ, ಬೋಗಾದಿ, ನಾಗಮಂಗಲ ತಾ. 40000
3. ಶ್ರೀ ಗ್ರಾಮ ದೇವತೆ ದೇವಾಲಯ, ಹೊನಳ್ಳಿ, ನಾಗಮಂಗಲ ತಾ. 40000
4. ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ ಕಾರಬೈಲು, ನಾಗಮಂಗಲ ತಾ. 40000

2001-2002

1. ಶ್ರೀ ಈಶ್ವರ ದೇವಾಲಯ, ಹೊಸಹಳ್ಳಿ, ನಾಗಮಂಗಲ ತಾ. 15000
2. ಶ್ರೀ ಮೈಲಾರಲಿಂಗೇಶ್ವರ ದೇವಾಲಯ, ಕಸಬಾ ಹೋಬಳಿ, ನಾಗಮಂಗಲ ತಾ 25000
3. ಶ್ರೀ ಆಂಜನೇಯಸ್ವಾಮಿ ದೇವಾಲಯ, ದೇವಲಾಪುರ, ನಾಗಮಂಗಲ ತಾ 20000

4.	ಶ್ರೀ ದೊಡ್ಡಮ್ಮದೇವಿ ದೇವಾಲಯ, ಮೊಳೆ ಗ್ರಾಮ, ನಾಗಮಂಗಲ ತಾ	30000
5.	ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ, ಕಾರಬೈಲು, ನಾಗಮಂಗಲ ತಾ	30000
6.	ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ, ಕಾರಬೈಲು ನಾಗಮಂಗಲ ತಾ	15000
7.	ಶ್ರೀ ಲಿಂಗೇಶ್ವರ ದೇವಾಲಯ, ತಾಳನಕೆರೆ ಹೋಬಳಿ, ನಾಗಮಂಗಲ ತಾ	15000
8.	ಶ್ರೀ ಈಶ್ವರ ದೇವಾಲಯ ಲಾಳನಕೆರೆ ನಾಗಮಂಗಲ ತಾ.	15000
	ಒಟ್ಟು	425000

ಶಿವಮೊಗ್ಗದಿಂದ ಸಕ್ರೇಬೈಲುವರಿಗೆ ರಾಷ್ಟ್ರೀಯ ಹೆದ್ದಾರಿ ನಿರ್ಮಾಣ

190(299) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗದಿಂದ ಸಕ್ರೆಬೈಲು ವರೆಗೆ 12.5 ಕಿಮೀ. ರಾಷ್ಟ್ರೀಯ ಹೆದ್ದಾರಿ ನಿರ್ಮಾಣದ ಕಾಮಗಾರಿಯು ಯಾವ ಹಂತದಲ್ಲಿದೆ?

ಆ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು??

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ರಾಷ್ಟ್ರೀಯ ಹೆದ್ದಾರಿ 13 (ಮುಂದುವರೆದ ಭಾಗ) ಚಿತ್ರದುರ್ಗ-ಮಂಗಳೂರು ರಸ್ತೆಯ ಭಾಗವಾದ ಶಿವಮೊಗ್ಗದಿಂದ ಸಕ್ರೆಬೈಲುವರೆಗೆ (ಕಿ.ಮೀ. 530.25 ರಿಂದ 544.00) 13.75 ಕಿ.ಮೀ. ಇರುತ್ತದೆ. ರಾಷ್ಟ್ರೀಯ ಹೆದ್ದಾರಿ 13ರ ಕಿ.ಮೀ. 530.25 ರಿಂದ 550.00 ರವರೆಗೆ ರಸ್ತೆಯನ್ನು ಬಲಪಡಿಸುವ ಕಾಮಗಾರಿಯು 2002-03ನೇ ಸಾಲಿನ ಅನುಮೋದಿತ ವಾರ್ಷಿಕ ಯೋಜನೆಯಲ್ಲಿ ಸೇರಿದ್ದು ರೂ. 480.00 ಲಕ್ಷಗಳ ಅಂದಾಜು ಪಟ್ಟಿಯನ್ನು ಕೇಂದ್ರ ರಸ್ತೆ ನಿಧಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯಕ್ಕೆ ಅನುಮೋದನೆಗೆ ಸಲ್ಲಿಸಲಾಗಿದೆ.

ಆ) ಅಂದಾಜು ಪಟ್ಟಿಯ ಅನುಮೋದನೆಯ ನಂತರ 2002-03ರಲ್ಲಿ ಅಂದರೆ ಇದೇ ವರ್ಷ ಕೆಲಸವನ್ನು ಕೈಗೆತ್ತಿಕೊಳ್ಳಲಾಗುವುದು.

ಬಗರ್ ಹುಕುಂ ಸಾಗುವಳಿ

191(300) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಗರ ಪ್ರದೇಶದ ಕೇಂದ್ರ ಭಾಗವನ್ನು ಗಣನೆಗೆ ತೆಗೆದುಕೊಂಡು 5 ಕಿ.ಮೀ. ಭೂ ಪರಿಮಿತಿಯೊಳಗೆ ಬಗರ್ ಹುಕುಂ ಸಾಗುವಳಿ ಮಾಡಿರುವ ಜಮೀನುಗಳ ಸಕ್ರಮಗೊಳಿಸುವ ಬಗ್ಗೆ ಹಾಲಿ ಇರುವ ಕಾಯ್ದೆಗೆ ತಿದ್ದುಪಡಿ ತರುವ ಯಾವುದಾದರೂ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? ವಿವರ ನೀಡುವುದು?